ಅ) ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ಮತ್ತು ಭದ್ರ ನದಿಗಳ ಸಂಗಮ ಸ್ಥಳವನ್ನು ಪ್ರವಾಸೋದ್ಯಮ ದೃಷ್ಟಿಯಿಂದ ಅಭಿವೃದ್ಧಿಪಡಿಸಿ, ಯಾತ್ರಿ ನಿವಾಸ ಇತ್ಯಾದಿ ಸೌಲಭ್ಯ ನೀಡಲು ಪ್ರವಾಸಿಗಳಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆ ಬಂದಿದೆಯೇ;

ಹೌದು, ಬೇಡಿಕೆ ಬಂದಿರುತ್ತದೆ. ಈ ಬೇಡಿಕೆಯಲ್ಲಿ ಕೂಡಲಿ ಕ್ಷೇತ್ರಕ್ಕೆ ಭೇಟಿ ನೀಡುವ ಪ್ರವಾಸಿಗರ / ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಧಾರ್ಮಿಕ ಮಂಟಪ, ಪಿತೃ ಯಜ್ಞ ಭವನ, ಅರ್ಚಕರು – ಉಪಾದಿವಂತರ ಗೃಹ, ಯಾತ್ರಾ ಭವನ, ಕಲ್ಯಾಣ ಮಂಟಪ, ಶೌಚಾಲಯ, ಉಲ್ಲೋಸೋದ್ಯಾನ ವನ, ಮುಂತಾದ ಸೌಕರ್ಯಗಳನ್ನು ಹಾಗೂ ನದಿಗೆ ಇಳಿಯಲು ರ್‍ಯಾಂಪ್ ನಿರ್ಮಾಣ, ಕಾಲಭೈರವ ದೇವಸ್ಥಾನವಿರುವ ಬೆಟ್ಟಕ್ಕೆ ಹೋಗಲು ಕಾಲು ಸೇತುವೆ ನಿರ್ಮಾಣ, ತುಂಗ ಭದ್ರಾ ನದಿಗೆ ಬ್ಯಾರೇಜು ನಿರ್ಮಾಣ ಇತ್ಯಾದಿಗಳನ್ನು ಕಲ್ಪಿಸಲು ರೂ. 10.00 ಕೋಟಿ ಅನುದಾನವನ್ನು ಒದಗಿಸುವಂತೆ ಸದರಿ ಮನವಿಯಲ್ಲಿ ಕೋರಲಾಗಿದೆ.

ಆ) ಶಿವಮೊಗ್ಗ ನಗರವನ್ನು ಕೇಂದ್ರಾವಾಗಿರಿಸಿಕೊಂಡು ಕೆ.ಎಸ್.ಟಿ.ಡಿ.ಸಿ ಉಪ ಕಚೇರಿ ಪ್ರಾರಂಭಿಸಿ, ಶೃಂಗೇರಿ, ಹೊರನಾಡು, ಕಳಸ, ಕೊಲ್ಲೂರು, ಶ್ರೀರಾಮಚಂದ್ರಪುರ ಮಠ, ಸಿಗಂಧೂರು, ಇಕ್ಕೇರಿ, ಕೆಳದಿ, ಜೋಗ, ಬನವಾಸಿ, ಶಿರಸಿ, ಬಳ್ಳಿಗಾವಿ, ಉಡುತಡಿ, ಇತ್ಯಾದಿ ಧಾರ್ಮಿಕ ಮತ್ತು ಪ್ರವಾಸಿ ಸ್ಥಳಗಳಿಗೆ 'Package Tour' ಮಾಡುವ ಯೋಜನೆ ಸರ್ಕಾರದ ಮುಂದೆ ಇದೆಯೇ; ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು; ವಿವರಿಸುವುದು?

ಶಿವಮೊಗ್ಗದಲ್ಲಿ ಉಪ ಕಛೇರಿಯನ್ನು ತೆರೆಯುವ ಯೋಜನೆ ಕೆ.ಎಸ್.ಟಿ.ಡಿ.ಸಿ,ಯ ಮುಂದೆ ಇರುವುದಿಲ್ಲ. ಆದರೆ, ಬೆಂಗಳೂರಿನಿಂದ ಏರ್ಪಡಿಸುತ್ತಿರುವ ವ್ಯವಸ್ಥಿತ ಪ್ರವಾಸಗಳಲ್ಲಿ ಶೃಂಗೇರಿ, ಕೊಲ್ಲೂರು, ಹೊರನಾಡು, ಕಳಸ ಜೋಗ್ ಮತ್ತು ಕೆಳದಿಗಳಿಗೆ ಪ್ರವಾಸಿಗರು ಸಂದರ್ಶಿಸಲು ಪ್ರವಾಸಗಳನ್ನು ಏರ್ಪಡಿಸಲಾಗುತ್ತಿದೆ.

ಕರ್ನಾಟಕ ವಿಧಾನಸಭೆ

362 ಶ್ರೀ ಕೆ.ಜಿ.ಕುಮಾರಸ್ವಾಮಿ
ಮಾನ್ಯ ಸಾರಿಗೆ ಸಚಿವರು

ಅ) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ;

ಇಲ್ಲ

ಆ) ಮೇಲ್ಕಂಡ ಪ್ರಸ್ತಾವನೆಯಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಶಿವಮೊಗ್ಗ ಭದ್ರಾವತಿ, ಸಾಗರ, ಶಿಕಾರಿಪುರ ಈ ರೀತಿ ನಾಲ್ಕು ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಡಿಪೋ ಆಗಲಿದ್ದು, ಶಿವಮೊಗ್ಗ ನಗರವನ್ನು ಕೇಂದ್ರವನ್ನಾಗಿರಿಸಿಕೊಂಡು ಶಿವಮೊಗ್ಗ ವಿಭಾಗ

ರಚಿಸುವ ಪ್ರಸ್ತಾವನೆ ಬಗ್ಗೆ ಸಾರ್ವಜನಿಕರು ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿದ್ದಾರೆಯೇ; ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಇಲ್ಲ.

ಕರ್ನಾಟಕ ವಿಧಾನ ಸಭೆ

366

ಶ್ರೀ.ಕೆ.ಜಿ.ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ)

ಮಾನ್ಯ ಪೌರಾಡಳಿತ ಸಚಿವರು

ಅ) ಪಟ್ಟಣ ಪಂಚಾಯತಿಗಳ ರಚನೆಗೆ ಇರಬೇಕಾದ ಜನಸಂಖ್ಯೆ, ಕೃಷಿಯೇತರ ಚಟುವಟಿಕೆ ನಾಗರೀಕ ಸೌಲಭ್ಯವಲ್ಲದೇ ಇನ್ನಿತರ ಕಾನೂನಾತ್ಮಕ ಅಂಶಗಳೇನು;

ಕರ್ನಾಟಕ ಪುರಸಭೆ ಕಾಯ್ದೆ 1964ರ ಕಲಂ 3ರ ಉಪ ಕಲಂ (1)ರ (ಎ) (ಬಿ) (ಸಿ) (ಡಿ) (ಇ) ಮತ್ತು (ಎಫ್) ಮತ್ತು ಕಲಂ 9ರಲ್ಲಿ ಓದಿಕೊಂಡಂತೆ ಕಲಂ 349ರನ್ವಯ ಯಾವುದೇ ಒಂದು ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಲು ಈ ಕೆಳಕಂಡ ಲಕ್ಷಣಗಳನ್ನು ಹೊಂದಿರಬೇಕಾಗುತ್ತದೆ.

1. ಅಂತಹ ಪ್ರದೇಶದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇಲ್ಲದಿರುವುದನ್ನು ಮತ್ತು ಇಪ್ಪತ್ತು ಸಾವಿರಕ್ಕಿಂತ ಕಡಿಮೆ ಇರುವುದನ್ನು;
2. ಅಂಥ ಪ್ರದೇಶದಲ್ಲಿ ಜನಸಾಂದ್ರತೆಯ ಒಂದು ಚದುರ ಕಿಲೋ ಮೀಟರ್ ವಿಸ್ತೀರ್ಣಕ್ಕೆ ನಾಲ್ಕು ನೂರಕ್ಕಿಂತ ಕಡಿಮೆಯಿಲ್ಲದಿರುವುದನ್ನು;
3. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗ ಪ್ರಮಾಣದ ಶೇಕಡಾ ಐವತ್ತಕ್ಕಿಂತ ಕಡಿಮೆ ಇಲ್ಲದಿರುವುದನ್ನು.

ಯಾವುದೇ ಒಂದು ಪ್ರದೇಶವು ತಾಲ್ಲೂಕ್ ಕೇಂದ್ರ ಸ್ಥಳವಾಗಿದ್ದಲ್ಲಿ ಅಂತಹ ಸ್ಥಳದ ಜನಸಂಖ್ಯೆಯು ಹತ್ತು ಸಾವಿರಕ್ಕಿಂತ ಕಡಿಮೆ ಇದ್ದಾಗ್ಯೂ ಸಹ, ರಾಜ್ಯಪಾಲರು ಅಂತಹ ಪ್ರದೇಶವನ್ನು ಪರಿವರ್ತಿತ ಪ್ರದೇಶವೆಂದು ಉದ್ಘೋಷಿಸಬಹುದಾಗಿದೆ.

ಆ) ಅಭಿವೃದ್ಧಿ ಹೆಚ್ಚಿಸುವ ದೃಷ್ಟಿಯಿಂದ ಶಿವಮೊಗ್ಗ ತಾಲ್ಲೂಕಿನಲ್ಲಿ ಆಯನೂರು, ಹಾರನಹಳ್ಳಿ ಗ್ರಾಮ ಪಂಚಾಯಿತಿಗಳನ್ನು ಸೇರಿಸಿ ಪಟ್ಟಣ ಪಂಚಾಯತಿ ಮಾಡಲು ಹಾಗೂ ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ (ವಿವರ ನೀಡುವುದು).

ಇಲ್ಲ.